ಖೈದಿಗಳಿಗೆ ಕೊಡಬೇಕಾದ ಆಹಾರ ಸರಿಯಾಗಿ ಕೊಡುತ್ತಿಲ್ಲದಿರುವ ಬಗ್ಗೆ

345-ಶ್ರೀ ಬಾಬುರಾವ್ ಚವಾಣ್(ಶಹಾಬಾದ್): ಮಾನ್ಯ ಬಂಧೀಖಾನೆ ಮತ್ತು ಗೃಹರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜೈಲಿನಲ್ಲಿ ಖೈದಿಗಳಿಗೆ ಕೊಡಬೇಕಾದಷ್ಟು ಆಹಾರ ಕೊಡುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ವಿಷಯದಲ್ಲಿ ಮಂತ್ರಿಗಳು ಗುಲ್ಬರ್ಗಾ ಜೈಲಿಗೆ ಭೇಟಿ ನೀಡಿರುವರೆ?

ಇ) ಖೈದಿಗಳಿಗೆ ಆಗುವ ಸಂಪಾದನೆ ಸರಿಯಾಗಿ ಆಗುತ್ತಿಲ್ಲಾ ಎಂಬುದು ನಿಜವೆ?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹರಕ್ಷಕ ದಳ ರಾಜ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ನಿಜವಲ್ಲ.

ಅಧ್ಯಕ್ಷರು : ಮಂಡಿಸಲಾಯಿತು.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ: ಮಾನ್ಯ ಅಧ್ಯಕ್ಷರೇ, ದಿನಾಂಕ 24.2.92ರಂದು ಪ್ರಶ್ನೋತ್ತರ ವೇಳೆ ರದ್ದಾದ ಕಾರಣ, ಆ ದಿನದ ಚುಕ್ಕೆ ಗುರುತಿನ ಪ್ರಶ್ನೆಗಳು ಹಾಗೂ ಉತ್ತರಗಳ ಪಟ್ಟಿಯನ್ನು ತಮ್ಮ ಅನುಮತಿಯನ್ನು ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.

ಮಂಗಳೂರು ತಾಲ್ಲೂಕಿನ ಉಳ್ಳಾಲದ ಸಮುದ್ರ ಕಿನಾರೆಯಲ್ಲಿ ಸಮುದ್ರ ಕೊರೆತ

49-ಶ್ರೀ ಬಿ.ಎಂ. ಇದಿನಬ್ಬ(ಉಳ್ಳಾಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕಿನ ಉಳ್ಳಾಲದ ಸಮುದ್ರ ಕಿನಾರೆಯಲ್ಲಿ, ಸಮುದ್ರ ಕೊರೆತ ಜೋರಾಗಿ, ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮುದ್ರ ಕೊರೆತ ನೀಗಿಸಲು ಶಾಶ್ವತ ತಡೆಗೋಡೆ ರಚನ ಮಾಡಲಾಗಿದೆಯೇ?

ಇ) ಈಗ ತಾತ್ಕಾಲಿಕ ತಡೆಗೋಡೆಗೆ ಕಲ್ಲುಗಳನ್ನು ಹಾಕಲಾಗುತ್ತದೆಯೇ ಹಾಗೂ ಈವರೆಗೆ ಆದಕ್ಕಾಗಿ ಖರ್ಚಾಗಿರುವ ಹಣವೆಷ್ಟು?

ಈ) ಈ ವರ್ಷ ಏಪ್ರಿಲ್ ಒಳಗೆ ತಡೆಗೋಡೆ ಸಂಪೂರ್ಣಗೊಳಿಸಲಾಗುವುದೇ ಹಾಗೂ ಆ ಬಗ್ಗೆ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮಗಳೇನು?

ಶ್ರೀ ಕೆ.ಎನ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಸಮುದ್ರ ಕೊರೆತ ತಡೆಗಟ್ಟಲು ಉಳ್ಳಾಲದಲ್ಲಿ ಒಟ್ಟು 450 ಮೀ. ಉದ್ದಕ್ಕೆ ಮೂರು ಬೇರೆ ಬೇರೆ ಭಾಗಗಳಲ್ಲಿ ಶಾಶ್ವತ ತಡೆಗೋಡೆ ರಚನೆ ಮಾಡಲಾಗಿದೆ.

ಇ) 1991-92ನೇ ಸಾಲಿನಲ್ಲಿ ಒಟ್ಟು 230 ಮೀ. ಉದ್ದಕ್ಕೆ (ಎರಡು ಜಾಗಗಳಲ್ಲಿ) ಸೆಕೆಂಡರಿ ಕಲ್ಲುಗಳನ್ನು ಹಾಕಿ ಸಮುದ್ರ ಕೊರೆತವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಇದಕ್ಕಾಗಿ ಸದರಿ ವರ್ಷದಲ್ಲಿ ರೂ. 10.53 ಲಕ್ಷ ಖರ್ಚು ಮಾಡಲಾಗಿದೆ.